ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

ಪ್ರವಾಹದಿಂದ ಹಾನಿಗೊಳಗಾದ ಸ್ವತ್ತನ್ನು ಪುನರ್ ನಿರ್ಮಿಸಿ ಕೊಡುವ ಬಗ್ಗೆ

ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-

432(590) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2019-20 ಹಾಗೂ 2020-21 ರ ಸಾಲುಗಳಲ್ಲಿ ಉಂಟಾದ ಪ್ರವಾಹದಿಂದಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವ ಯಾವ ಯಾವ ಸ್ವತ್ತುಗಳು ಹಾನಿಗೊಳಗಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು; ಈ ಸ್ವತ್ತುಗಳ ಮೌಲ್ಯವೆಷ್ಟು;

(ಆ) ಹಾನಿಗೊಳಗಾದ ಈ ಸ್ವತ್ತುಗಳನ್ನು ದುರಸ್ಥಿ/ಪುನರ್ ನಿರ್ಮಾಣ ಮಾಡಲಾಗಿದೆಯೇ; ಇದಕ್ಕಾಗಿ ಖರ್ಚು ಮಾಡಿದ ಒಟ್ಟು ಅನುದಾನವೆಷ್ಟು; ಯಾವ ಯಾವ ಅನುದಾನದ ಕೆಳಗೆ ಖರ್ಚು ಮಾಡಲಾಗಿದೆ;

(ಇ) ಇನ್ನು ಎಷ್ಟು ಆಸ್ತಿಪಾಸ್ತಿಗಳನ್ನು ದುರಸ್ಥಿ/ಪುನರ್ ನಿರ್ಮಾಣ ಮಾಡಬೇಕಾಗಿದೆ;

(ಈ) ಇದಕ್ಕೆ ತಗಲುವ ವೆಚ್ಚವೆಷ್ಟು? (ಜಿಲ್ಲಾವಾರು ವಿವರ ನೀಡುವುದು)